


# ಲೋಕ ಮರೆಯದ ‘ಲೋಮೋಗ್ರಫಿ’!



**ಯಾವುದೇ ಪ್ರಚಾರವಿಲ್ಲದೆ ಫೋಟೋಗ್ರಫಿಯ ಈ ತಂತ್ರ ಬಹಳ ಜನಪ್ರಿಯವಾಯಿತು. ಸುಲಭದಲ್ಲಿ ವಿಚಿತ್ರ ಚಿತ್ರಗಳನ್ನು ತೆಗೆಯುವ ತಂತ್ರ ಜನರಿಗೆ ಭಾರೀ ಖುಷಿ ನೀಡಿತು.**

ಚಿತ್ರ– ಲೇಖನ: **ಹರೀಶ್ ಹಳೆಮನೆ**

ಇದೊಂದು ಫಿಲ್ಮ್ ಕ್ಯಾಮೆರಾ. ಲೋಮೋ ಎಲ್‌ಸಿ – ವೈಡ್ ಎಂಬ ಹೆಸರಿನ ಈ ಕ್ಯಾಮೆರಾದ ಬೆಲೆ ಕೇವಲ 350 ಡಾಲರ್! ಹೆಚ್ಚು ಕಡಿಮೆ 23000 ರೂಪಾಯಿ! ಕಾಂಪ್ಯಾಕ್ಟ್ ಡಿಜಿಟಲ್ ಕ್ಯಾಮೆರಾಗಳು ಕೂಡ ಮಾರುಕಟ್ಟೆಯಿಂದ ಬಹುತೇಕ ಕಣ್ಮರೆಯಾಗಿರುವ ಈ ಕಾಲದಲ್ಲಿ ಫಿಲ್ಮ್ ಕ್ಯಾಮೆರಾ ಇಷ್ಟೊಂದು ಜನಪ್ರಿಯವೇ? ಯಾಕೆ? ಈ ಲೋಮೋ ಕ್ಯಾಮೆರಾಗಳ ಆಕರ್ಷಣೆಯೇ ಅಂಥದ್ದು. ಲೋಮೋ ಕ್ಯಾಮೆರಾಗಳಲ್ಲಿ ಚಿತ್ರ ತೆಗೆಯುವುದನ್ನು ಛಾಯಾಗ್ರಹಣದಲ್ಲಿ ‘ಲೋಮೋಗ್ರಫಿ’ ಎಂಬ ಶಾಖೆಯಾಗಿ ವಿಂಗಡಿಸಿದ್ದಾರೆ. ಅಷ್ಟರಮಟ್ಟಿಗೆ ಬೆಳೆದುಬಿಟ್ಟಿರುವ ಛಾಯಾಗ್ರಹಣದ ಈ ಶಾಖೆ ಈಗಲೂ ಜನಪ್ರಿಯವಾಗಿ ಬೆಳೆಯುತ್ತಿದೆ. ಭಾರತದಲ್ಲೂ ಇದು ಈಗಷ್ಟೇ ಕಾಲೂರಿದೆ. ಮೊನ್ನೆಯಷ್ಟೇ (ಆಗಸ್ಟ್ 19) ‘ವಿಶ್ವ ಛಾಯಾಗ್ರಹಣ ದಿನ’ ಆಚರಿಸಿದ್ದೇವೆ. ಆ ಹಿನ್ನೆಲೆಯಲ್ಲಿ ಛಾಯಾಗ್ರಹಣದ ಒಂದು ವಿಶಿಷ್ಟ ಶಾಖೆಯ ಬಗ್ಗೆ ಒಂದು ಪುಟ್ಟ ಪರಿಚಯದ ಯತ್ನವಿದು.

1982ರ ಸಮಯದಲ್ಲಿ ರಷ್ಯಾದ ರಕ್ಷಣಾ ಸಚಿವರ ಬಲಗೈಯಾಗಿದ್ದ ಜನರಲ್ ಐಗರ್ ಪೆಟ್ರೋವಿಚ್ ಕಾರ್ನಿಟ್ಸ್ಕಿಗೆ ಛಾಯಾಗ್ರಹಣದ ಹವ್ಯಾಸವಿತ್ತು. ಅವನು ಒಂದು ದಿನ ತನ್ನ ಕೈಯಲ್ಲಿದ್ದ ಜಪಾನೀ ಕ್ಯಾಮೆರಾವೊಂದನ್ನು ಮಿತ್ರನಾದ ಮಿಖಾಯಿಲ್ ಪಾನ್ಫಿಲೋಫ್‌ನ ಮೇಜಿನ ಮೇಲೆ ಕುಕ್ಕಿದ. ಪಾನ್ಫಿಲೋಫ್ ರಷ್ಯಾದ ಪ್ರಸಿದ್ಧ ಆಯುಧ ಹಾಗೂ ಆಪ್ಟಿಕಲ್ ಕಂಪೆನಿ ‘ಲೋಮೋ’ದ ನಿರ್ದೇಶಕನಾಗಿದ್ದ. ಮೇಜಿನ ಮೇಲೆ ಗಟ್ಟಿಯಾಗಿ ಬಡಿದರೂ ಏನೂ ಆಗದ ಕ್ಯಾಮೆರಾದ ಬಗ್ಗೆ ಅವನಿಗೆ ಕುತೂಹಲವುಂಟಾಯಿತು.

ಆತನಿಗೆ ಈ ಕ್ಯಾಮೆರಾದ ಗಾಜಿನ ಲೆನ್ಸ್, ಕಡಿಮೆ ಬೆಳಕಿನಲ್ಲೂ ಚಿತ್ರ ತೆಗೆಯಬಲ್ಲ ಸಾಮರ್ಥ್ಯ ಹಾಗೂ ಗಟ್ಟಿಯಾದ ಕವಚಗಳು ಆಕರ್ಷಕವಾಗಿ ತೋರಿದವು. ಆ ಕ್ಯಾಮೆರಾದ ಗುಣಗಳನ್ನು ಕಂಡುಕೊಂಡ ಅವರಿಬ್ಬರು ಅದರ ಪರಿಷ್ಕೃತ ನಕಲನ್ನು ತಯಾರಿಸಲು ಆದೇಶ ನೀಡಿದರು. ಸೋವಿಯತ್ ರಷ್ಯಾದಲ್ಲಿನ ಪ್ರತಿಯೊಬ್ಬ ಗೌರವಾನ್ವಿತ ಕಮ್ಯುನಿಸ್ಟ್ ಕೂಡ ತನ್ನದೇ ಆದ ‘ಲೋಮೋ ಕಾಂಪ್ಯಾಕ್ಟ್ ಅಟೋಮ್ಯಾಟ್’ ಕ್ಯಾಮೆರಾ ಹೊಂದಿರಬೇಕೆಂಬ ಆದೇಶ ಹೊರಡಿಸಲಾಯಿತು.

ಹಾಗೆ ಮಿಲಿಯಗಟ್ಟಲೆ ‘ಲೋಮೋ ಎಲ್.ಸಿ.–ಎ’ ಕ್ಯಾಮೆರಾಗಳು ಮಾರಾಟವಾದವು. ಮೊದಲಿಗೆ ಹೇಳಲಾದ ‘ಲೋಮೋ ಎಲ್‌ಸಿ – ’ ಇದೇ ಕ್ಯಾಮೆರಾದ ಹೊಸರೂಪ. ಸೋವಿಯತ್ ದೇಶ ಮಾತ್ರವಲ್ಲದೆ ಅದರ ಸೋಶಿಯಲಿಸ್ಟ್ ಮಿತ್ರ ದೇಶಗಳಾದ ವಿಯೆಟ್ನಾಂ, ಕ್ಯೂಬಾ ಹಾಗೂ ಪೂರ್ವ ಜರ್ಮನಿ ದೇಶಗಳಲ್ಲೂ ಈ ಕ್ಯಾಮೆರಾಗಳು ಬಹಳ ನಪ್ರಿಯವಾದವು.

1990ರ ದಶಕದಲ್ಲಿ ಏಷ್ಯಾದಿಂದ ಇನ್ನೂ ಅಗ್ಗವಾದ ಕ್ಯಾಮೆರಾಗಳು ಬರುವುದರೊಂದಿಗೆ ಒಮ್ಮೆಗೆ ಲೋಮೋ ಕ್ಯಾಮೆರಾಗಳ ದುರ್ದೆಸೆ ಆರಂಭವಾಯಿತು. ಆದರೂ, ವಿಯೆನ್ನಾದ ವಿದ್ಯಾರ್ಥಿಗಳು ಒಮ್ಮೆ ಪ್ರೇಗ್‌ನ ಪ್ರವಾಸಕ್ಕೆ ಹೋಗಿರುವಾಗ ತಮ್ಮೊಂದಿಗೆ ಒಂದೆರಡು ‘ಲೋಮೋ’ಗಳನ್ನು